ಮಾತ್ರ ನೀರು ಕೊಡುವುದಕ್ಕೆ ಸಾಧ್ಯ ಇದೆ. ಈಗ ಅಲ್ಲಿ 6 ಪಬ್ಲಿಕ್ ವೆಲ್ಸ್ ಮತ್ತು 13 ಪ್ರೈವೇಟ್ ಬಾವಿಗಳು ಇವೆ. 1972 ಮೇ ಮತ್ತು 1973 ರ ಫೆಬ್ರವರಿ ತಿಂಗಳಲ್ಲಿ ಸುಮಾರು 12 ಬಾವಿಗಳನ್ನು ಡೀಸಲ್ ಮಾಡಿಸುವುದಕ್ಕೆ 1,339 ರೂಪಾಯಿಗಳು ಖರ್ಚಾಗಿದೆ.

ಕೆಲವು ಬಾವಿಗಳಲ್ಲಿ ಬ್ರಾಕಿಷ್ ವಾಟರ್ ಸಿಕ್ಕುತ್ತಿದ್ದು ಅದನ್ನು ಕುಡಿಯುವುದಕ್ಕೆ ಉಪಯೋಗಿಸದೆ ಇದ್ದರೂ ಕೂಡ ಬಟ್ಟೆ ಒಗೆಯುವುದಕ್ಕೆ ದನಕರುಗಳಿಗೆ ಕುಡಿಸುವುದಕ್ಕೆ ಉಪಯೋಗಿಸುತ್ತಿದ್ದಾರೆ. ಅಲ್ಲಿ ಒಂದು ಬೋರ್‌ವೇಲ್ ಕೂಡ ಹಾಕಿದ್ದೇವೆ. 171 ಅಡಿ ಆಳ ಹೋಗಿದ್ದರೂ ಕೂಡ ಅಲ್ಲಿ ನೀರು ಸಿಕ್ಕಲಿಲ್ಲ. 64,600 ರೂಪಾಯಿ ಖರ್ಚು ಮಾಡಿ ಒಂದು ಕೆರೆಯನ್ನು ಕಟ್ಟಿಸಿದೆವು. ಮಂಳೆ ಬಾರದೆ ಇದ್ದುದರಿಂದ ಕೆರೆಗೆ ನೀರು ಬರಲಿಲ್ಲ. ಆದುದರಿಂದ ಈವಾಗ ಬಿಲ್ಲದಕಟ್ಟೆಯಿಂದ ನೀರನ್ನು ಟ್ರಕ್ ಮೂಲಕ ಒದಗಿಸಿಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ.

ಶ್ರೀ ಎಂ. ಕೆ. ಕುಲಕರ್ಣಿ :—12 ಬಾವಿಗಳನ್ನು ಆಳ ಮಾಡಿದರೂ ಅದರಲ್ಲಿನ ನೀರು ಕುಡಿಯುವುದಕ್ಕೆ ಬಾರದ ಉಪ್ಪು ನೀರಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಎಲ್ಲದರಲ್ಲಿಯೂ ಉಪ್ಪು ನೀರು ಇಲ್ಲ.

ಶ್ರೀ ಎಂ. ಕೆ. ಕುಲಕರ್ಣಿ :—ಅಲ್ಲಿ ಕುಡಿಯುವುದಕ್ಕೆ ನೀರು ದೊರಕುವುದಿಲ್ಲ. ಬೇರೆ ಉಪಯೋಗಕ್ಕೆ ಮಾತ್ರ ದೊರಕುತ್ತದೆ. ಆದುದರಿಂದ ಸರ್ಕಾರ ಅಲ್ಲಿಗೆ ಲಾರಿಯಿಂದಲಾದರೂ ನೀರನ್ನು ಒದಗಿಸುತ್ತದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಆದರ ಬಗ್ಗೆ ಈಗಾಗಲೇ ಹೇಳಿದ್ದೇನೆ. ಇದರ ಜೊತೆಗೆ ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟಿಗೆ ಡೈರೆಕ್ಷನ್ ಕೊಟ್ಟು ಆ ಗ್ರಾಮಕ್ಕೆ ಯಾವ ತರಹದಲ್ಲಿಯೂ ನೀರಿನ ತೊಂದರೆಯಿಲ್ಲದೆ ಪರ್ಮನೆಂಟ್ ಮೆಷರ್ ಮಾಡುವುದಕ್ಕೆ ಇನ್‌ವೆಸ್ಟಿಗೇಷನ್ ಮಾಡಿಸಿ ರಿಪೋರ್ಟ್ ಕಳುಹಿಸಿ ಎಂದು ಹೇಳಿದ್ದೇವೆ.

REMISSION OF LAND REVENUE IN SRINIVASAPUR TALUK

885. Sri S. BACHI REDDY (Srinivasapur).—

Will the Minister for Revenue be pleased to state :—

(*a*) the average yield of dry crops per acre in Srinivasapur Taluk ;

(*b*) the number of tanks in the Taluk which received water during the year 1972 ;

(*c*) whether Government intended to grant remission of Land Revenue due to failure of crops in this area ?

Sri N. HUTCHAMASTHY GOWDA (Minister for Revenue) —

(*a*) More than 50 per cent.

(*b*) 362 tanks.

(*c*) No.

ಶ್ರೀ ಎಸ್. ಬಾಚಿರೆಡ್ಡಿ :—ಮಾನ್ಯ ಮಂತ್ರಿಗಳ ಉತ್ತರದಲ್ಲಿ, ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಸಾಕಾದಷ್ಟು ಮಳೆಯಾಗಿದೆ ಮತ್ತು ಬೆಳೆಗಳು 50 ಪರ್ಸೆಂಟ್ ಆಗಿದೆ, ಆದ್ದರಿಂದ ಆ ತಾಲ್ಲೂಕಿನಲ್ಲಿ ಕಂದಾಯ ಮಾಫಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ವಾಸ್ತವವಾಗಿ ಹೇಳಬೇಕಾದರೆ 50 ಪರ್ಸೆಂಟ್ ಬೆಳೆಯಾಗಿದೆ ಎನ್ನುವುದು ಪಹಣಿ ಆಧಾರದ ಮೇಲೆ. ಸಾಮಾನ್ಯವಾಗಿ ಸೆಕೆಂಡ್ ಡಿವಿಷನ್ ಗುಮಾಸ್ತರು ಪಹಣಿ ಬರೆಯುತ್ತಾರೆ. ನಮ್ಮ ತಾಲ್ಲೂಕಿನಲ್ಲಿ ಮತ್ತು ಇಡೀ ಕೋಲಾರ ಜಿಲ್ಲೆಯಲ್ಲಿ ಮಳೆ ಸಾಕಾದಷ್ಟು ಬಾರದೆ ಕೆಲವು ಸಂದರ್ಭಗಳಲ್ಲಿ ಬೆಳೆ ಇಟ್ಟ ಎರಡೂವರೆ ತಿಂಗಳವರೆಗೆ ಮಳೆ ಬಾರದೆ ಬೆಳೆಯಲ್ಲ ಒಣಗಿ ಹೋಗಿದೆ. ಅಂಥ ಸಂದರ್ಭದಲ್ಲಿ, ಅಭಾವ ಒದಗಿದಂಥ ಸಂದರ್ಭದಲ್ಲಿ ಮಾನ್ಯ ರೆವೆನ್ಯೂ ಮಂತ್ರಿಗಳು ಮತ್ತು ಇತರ ಮಂತ್ರಿಗಳು ಆ ಪ್ರದೇಶದಲ್ಲಿ ಸಂಚರಿಸಿ ಆ ತಾಲ್ಲೂಕಿನಲ್ಲಿ ಅಭಾವ ಪರಿಸ್ಥಿತಿ ಇದೆ, ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಆದೇಶ ಕೂಡ ಕೊಟ್ಟಿದ್ದಾರೆ; ಅನೇಕ ಕಾರ್ಯಕ್ರಮ ಕೂಡ ತೆಗೆದುಕೊಂಡಿದ್ದಾರೆ. ಈ ದೆಸೆಯಿಂದ ಈಗಲಾದರೂ ಕೂಡ ಮಾನ್ಯ ಮಂತ್ರಿಗಳು ಮಾನವೀಯತೆಯ ದೃಷ್ಟಿಯಿಂದ ಪುನರ್ಪರಿಶೀಲಿಸಿ ಆ ತಾಲ್ಲೂಕಿಗೆ ಪರಿಹಾರ ಕೊಡುವ ಕ್ರಮ ತೆಗೆದುಕೊಳ್ಳುತ್ತಾರೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ನನಗೆ ಸಾಮಾನ್ಯವಾಗಿ ಬರತಕ್ಕ ವರದಿ ರೆವೆನ್ಯೂ ಅಧಿಕಾರಿಗಳಿಂದ ಎಂದರೆ ಗ್ರಾಮಾಧಿಕಾರಿಗಳು ಸ್ಥಳದಲ್ಲಿ ಬರೆಯುವ ಪಹಣಿ ಆಧಾರವೇ ನಮಗೆ ಮುಖ್ಯವಾದ ಆಧಾರ. ಅದನ್ನು ನಂಬುವುದಕ್ಕಾಗುವುದಿಲ್ಲ, ಸರಿಯಾಗಿ ಬರೆದಿಲ್ಲ ಎಂದರೆ ನನಗೆ ಬೇರೆ ಆಧಾರ ಸಾಮಾನ್ಯವಾಗಿ ಇಲ್ಲ. ಅದರ ಜೊತೆಗೆ ಆಗಸ್ಟ್ ತಿಂಗಳಿನಲ್ಲಿ ನಾನು ಹೋಗಿ ನೋಡಿಕೊಂಡು ಬಂದೆ. ಆಗ ತೊಂದರೆ ಇತ್ತು. ಸೆಪ್ಟೆಂಬರ್ ತಿಂಗಳಿನಿಂದ ಮಳೆ ಪ್ರಾರಂಭವಾಗಿ ವಾರವಾರವೂ ಏನೇನು ಮಳೆಯಾಗಿದೆ ಎನ್ನುವ ವಿವರ ತಾಲ್ಲೂಕಾಫೀಸಿನಲ್ಲಿದೆ. ಅದನ್ನು ಕೂಡ ನೋಡಿದರೆ ಬೆಳೆಯಾಗಿದೆ, ಸೇಕಡ 50ಕ್ಕಿಂತ ಹೆಚ್ಚಾಗಿ ಬೆಳೆಯಾಗಿದೆ ಎನ್ನತಕ್ಕ ವರದಿ ಬಂದಿದೆ. ಅದರ ಜೊತೆಗೆ ಅಲ್ಲಿರತಕ್ಕ 56 ಮೇಜರ್ ಮತ್ತು 306 ಸಣ್ಣ ಕೆರೆಗಳಿಗೆ ನೀರು ಬಂದು ಅಲ್ಲಿಯೂ ಕೂಡ ಬೆಳೆಯಾಗಿದೆ ಎನ್ನತಕ್ಕ ವರದಿ ಇದೆ. ನನಗೆ ಇದಲ್ಲದೆ ಬೇರೆ ಆಧಾರವಿಲ್ಲ. ಮಾನ್ಯ ಸದಸ್ಯರು ಬಹಳ ಕಳಕಳಿಯಿಂದ ತೊಂದರೆಯಾಗಿದೆ ಎಂದು ಹೇಳುತ್ತಿದ್ದಾರೆ. ಈಗ ಹೋಗಿ ಪರೀಕ್ಷೆ ಮಾಡುವುದು ಕಷ್ಟ. ಬೆಳೆ ಬಂದಕಾಲದಲ್ಲಿ ಎಂದರೆ ಡಿಸೆಂಬರ್ ಜನವರಿ ತಿಂಗಳಿನಲ್ಲಿ, ಕಟಾವಿಗೆ ಬರತಕ್ಕಕಾಲದಲ್ಲಿ ಕ್ರಾಪ್‌ಕಟಿಂಗ್ ಎಕ್ಸ್‌ಪರಿಮೆಂಟ್ ಮಾಡುವುದಕ್ಕೆ ಸಾಧ್ಯವಿತ್ತು. ಈಗ ಹೋಗಿ ತಿಳಿದುಕೊಳ್ಳುವುದು ಬಹಳ ಕಷ್ಟವಿದೆ. ಆದುದರಿಂದ ಪಹಣಿಯನ್ನೇ ನಂಬಿ, ಮಾನ್ಯಸದಸ್ಯರಿಗೆ ನೋವಾದರೂಕೂಡ ಅದೇ ಉತ್ತರವನ್ನು ಹೇಳಬೇಕಾಗಿದೆ.

ಶ್ರೀ ಎ. ವಿ. ಮುನಿಸ್ವಾಮಿ :—ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಮಳೆಯಾಗಿದೆ, 362 ಕೆರೆಗಳು ತುಂಬಿವೆ ಎಂದು ಹೇಳಿದರು. ಕೆರೆಗಳು ಎಷ್ಟುಸಾರಿ ತುಂಬಿದರೆ ಬೆಳೆಯಾಗುತ್ತದೆ ಎನ್ನುವುದನ್ನು ಹೇಳುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಆ ಕೆರೆಗಳನ್ನು ನೋಡಿ ಹೇಳಬೇಕು. ಒಂದು ಸಾರಿ ತುಂಬಿದರೆ ಬೆಳೆಯಾಗುತ್ತದೆಯೋ, ಎರಡುಸಾರಿ ತುಂಬಿದರೆ ಬೆಳೆಯಾಗುತ್ತದೆಯೋ ಎನ್ನುವುದು ಆಯಾ ಕೆರೆಗೆ ಎಷ್ಟು ನೀರು ಬರುತ್ತದೆ, ಆ ವರ್ಷ ಎಷ್ಟು ಮಳೆಯಾಯಿತು, ಎಷ್ಟು ಜಮೀನು ಅದರ ಮೇಲೆ ಅವಲಂಬಿಸಿದೆ ಎನ್ನುವ ವಿವರಗಳೆಲ್ಲ ನನ್ನಹತ್ತಿರ ಇಲ್ಲ ನನಗೆ ಬಂದಿರುವ ವರದಿಯನ್ನು ಸಭೆಗೆ ತಿಳಿಸಿದ್ದೇನೆ.

ಶ್ರೀ ಕೆ. ಎಂ. ದೊರೆಸ್ವಾಮಿನಾಯ್ಡು :—ಕೋಲಾರ ಜಿಲ್ಲೆಯಲ್ಲಿ ಮಳೆ ಬರುವುದು 20–25 ಅಂಗುಲ. ಆದು ಕಾಲದಲ್ಲಿ ಸೆಪ್ಟೆಂಬರ್ ತಿಂಗಳಿನಲ್ಲಿ ಬಂದು ಅಲ್ಪ ಸ್ವಲ್ಪ ಕೆರೆಗಳಲ್ಲಿ ನೀರು ಬಂದು ಬೆಳೆಯಾಗಿದೆ ಎಂದು ಹೇಳಿದ್ದಾರೆ. ಆ ನೀರಿನಿಂದ ಖಂಡಿತ ಬೆಳೆಯಾಗಿಲ್ಲ ಆದ್ದರಿಂದ ಕೋಲಾರ ಜಿಲ್ಲೆಯನ್ನು ಅಭಾವ ಪ್ರದೇಶವೆಂದು ಸಾರಿ, ಕಂದಾಯ ಮಾಫಿ ಮಾಡಬೇಕು ಮತ್ತು ಸಾಲ ವಸೂಲಿ ಮುಂದಕ್ಕೆ ಹಾಕಬೇಕು ಈ ಕೆಲಸ ಮಾಡುತ್ತೀರಾ ಸ್ವಾಮಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಕೆರೆಗಳ ಹಿಂದೆ ಬೆಳೆಯಾಗದೆ ಇದ್ದರೆ ಅದಕ್ಕೆ ಒಂದು ಮಾರ್ಗವಿದೆ. ಸಂಬಂಧಪಟ್ಟ ಅಸಿಸ್ಟೆಂಟ್ ಕಮೀಷನರ್ ಮತ್ತು ಅಸಿಸ್ಟೆಂಟ್ ಇಂಜಿನಿಯರ್ ಸ್ಥಳಗಳಿಗೆ ಹೋಗಿ, ಆ ಕೆರೆಯಿಂದ ಬೆಳೆಯಾಗಿದೆಯೇ ಇಲ್ಲವೇ ಎಂದು ನೋಡಿ, ಗ್ರಾಮದಲ್ಲಿ ವಿಚಾರಣೆಮಾಡಿ ಬೆಳೆಯಾಗಲಿಲ್ಲವೆಂದು ಕಂಡುಬಂದರೆ ವಾಟರೇಟ್ ವಜಾಮಾಡತಕ್ಕ ಒಂದು ಕ್ರಮವಿದೆ ಅಧಿಕಾರಿಗಳನ್ನು ಕಳುಹಿಸಿ, ಕೆರೆಗಳ ಹಿಂದೆ ಬೆಳೆಯಾಯಿತೇ ಇಲ್ಲವೇ ಎನ್ನುವ ಬಗ್ಗೆ ವರದಿಯನ್ನು ತರಿಸಿಕೊಂಡು ಬೆಳೆಯಾಗಿಲ್ಲವೆಂದು ಕಂಡುಬಂದರೆ ವಾಟರೇಟ್ ವಜಾ ಮಾಡತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ELECTRIFICATION OF VILLAGES IN SRINIVASAPUR TALUK

905. Sri S. BACHI REDDY (Srinivasapur).—

Will the Minister for Public Works and Electricity be pleased to state :—

(*a*) the number of villages included in the village electrification programme for the year 1972-73 together with names of villages in Srinivasapur Taluk ;

(*b*) the number of villages electrified ;

(*c*) the reasons for not taking up the remaining villages ?

Sri H. M. CHANNABASAPPA (Minister for Public Works and Electricity).—

(*a*) 92 villages were included in the consolidated programme drawn up for the years 1971-72 and 1972-73 as indicated in the Statement appended.

(*b*) Of these, 56 have been electrified till the end of March 1973.

(*c*) Preliminary works connected with the electrification of the remaining villages are under various stages of progress.